VK
ವಿಜಯ ಕರ್ನಾಟಕ

# ಮತ ಚಲಾಯಿಸಿ ದೇಶದ ಪ್ರಗತಿಗೆ ಸಹಕರಿಸಿ

**ಹುಣಸೂರಿನಲ್ಲಿ ಮತದಾರರ ದಿನಾಚರಣೆ**

■ **ವಿಕ ಸುದ್ದಿಲೋಕ** ಹುಣಸೂರು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನವೇ ಪ್ರಮುಖವಾಗಿದ್ದು, ಪ್ರತಿಯೊಬ್ಬರೂ ಕಡ್ಡಾಯವಾಗಿ ಮತ ಚಲಾಯಿಸುವ ಮೂಲಕ ದೇಶದ ಪ್ರಗತಿಗೆ ಕಾರಣರಾಗುವಂತೆ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶೆ ಜೈಬುನ್ನೀಸಾ ವಿದ್ಯಾರ್ಥಿನಿಯರಿಗೆ ಸಲಹೆ ನೀಡಿದರು.

ನಗರದ ಮಹಿಳಾ ಪದವಿ ಕಾಲೇಜಿನಲ್ಲಿ ತಾಲೂಕು ಆಡಳಿತ, ಕಾನೂನು ಸೇವಾ ಸಮಿತಿ, ವಕೀಲರ ಸಂಘ ಸಂಯುಕ್ತವಾಗಿ ಆಯೋಜಿಸಿದ್ದ ರಾಷ್ಟ್ರೀಯ ಮತದಾರರ ದಿನ ಉದ್ಘಾಟಿಸಿ ಮಾತನಾಡಿದ ಅವರು,''ಖಡ್ಗಕ್ಕಿಂತ ಹರಿತವಾದುದು ಮತದಾನವೆಂಬುದನ್ನು ಅರಿಯಿರಿ. ವಿವೇಚನಯುತವಾಗಿ ಮತನೀಡುವ ಮೂಲಕ ಪ್ರಜ್ಞಾವಂತ, ವಿವೇಕವುಳ್ಳ, ಅಭಿವೃದ್ಧಿ ಸೇರಿದಂತೆ ಜನಹಿತ ಬಯಸುವ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ದೇಶವನ್ನು ಮುನ್ನಡೆಸಬಹುದಾಗಿದೆ,'' ಎಂದು ಅಭಿಪ್ರಾಯಪಟ್ಟರು.



ಹುಣಸೂರು ಮಹಿಳಾ ಕಾಲೇಜಿನಲ್ಲಿ ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ಆಯೋಜಿಸಿದ್ದ ನಾನಾ ಸ್ಪರ್ಧೆಗಳ ವಿಜೇತ ವಿದ್ಯಾರ್ಥಿಗಳೊಂದಿಗೆ ನ್ಯಾಯಾಧೀಶರಾದ ಜೈಬುನ್ನೀಸಾ, ಎ.ಸಿ.ಮಹಮ್ಮದ್ ಹಾರೀಸ್‌ಸುಮೇರ್, ಇ.ಒ.ಮನು, ಪ್ರಾಚಾರ್ಯ ಪುಟ್ಟಶೆಟ್ಟಿ ಇತರರು ಇದ್ದರು.

ಉಪ ವಿಭಾಗಾಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್ ಮಾತನಾಡಿ, ''ಮತದಾನ ಪವಿತ್ರವಾದುದು. ನಮ್ಮ ಭವಿಷ್ಯದ ನಾಯಕರನ್ನು ಆಯ್ಕೆ ಮಾಡು ವಾಗ ಎಚ್ಚರಿಕೆ ವಹಿಸಬೇಕು. ಪ್ರಣಾಳಿಕೆ, ಅಭಿವೃದ್ಧಿ, ಸಮರ್ಥ ನಾಯಕತ್ವವನ್ನು ಗುರುತಿಸಿ ಮತಹಾಕುವ ಮೂಲಕ ಜನಪ್ರತಿನಿಧಿಯನ್ನು ಆಯ್ಕೆ ಮಾಡಬೇಕು. ಮತದಾನವಷ್ಟೆ ಅಲ್ಲ, ನಂತರ ಪ್ರಶ್ನಿಸುವ ಮನೋಬಾವ ರೂಢಿಸಿಕೊಳ್ಳಬೇಕು. ಚುನಾವಣೆಗೆ ಸ್ಪರ್ಧಿಸುವ ಉಮೇದು ಬೆಳೆಸಿಕೊಳ್ಳಿ. ಮತದಾನದ ಮಹತ್ವವನ್ನು ಇತರರಿಗೂ ಪ್ರಚುರಪಡಿಸಿ,'' ಎಂದರು. p›05

# ಮತ ಚಲಾಯಿಸಿ ದೇಶದ ಪ್ರಗತಿಗೆ ಸಹಕರಿಸಿ

» ನಮ್ಮ ಮೊದಲ ಪುಟದಿಂದ

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಪುಟ್ಟಶೆಟ್ಟಿ ಮಾತನಾಡಿ,''1950 ಜ.25 ರಂದು ನಮ್ಮ ಚುನಾವಣಾ ಆಯೋಗ ಸ್ಥಾಪಿಸಿದ ದಿನವನ್ನು ಮತದಾರರ ದಿನ ವೆಂದು ಆಚರಿಸಲಾಗುತ್ತಿದೆ. ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಯುವ ಮತದಾರರನ್ನು ನೋಂದಾಯಿಸುವ, ಮತದ ಮಹತ್ವವನ್ನು ತಿಳಿಸುವ ಮಹತ್ವದ ದಿನವಾಗಿದೆ,'' ಎಂದರು.

ತಾ.ಪಂ.ಇಒ ಬಿ.ಕೆ.ಮನು, ವಕೀಲರ ಸಂಘಧ ಅಧ್ಯಕ್ಷ ಶಿವಣ್ಣೇಗೌಡ, ಪ್ರಾಧ್ಯಾಪಕರಾದ ಡಾ.ಸಿ.ಎನ್.ಕಾವ್ಯ, ಡಾ.ಪ್ರಸನ್ನ, ಎಸ್.ಎಂ.ಕುಮಾರ್ ಮಾತನಾಡಿದರು. ಚುನಾವಣಾ ಶಿರಸ್ತೆದಾರ್ ಕಿರಣ್‌ಕುಮಾರ್, ವಿದ್ಯಾರ್ಥಿನಿಯರು ಬಾಗವಹಿಸಿದ್ದರು. ಮತದಾರರ ದಿನದ ಅಂಗವಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

## ಸ್ಪರ್ಧಾ ವಿಜೇತರು

ಭಿತ್ತಿಚಿತ್ರ ಸ್ಪರ್ಧೆಯಲ್ಲಿ ಸರಸ್ವತಿ(ಪ್ರ), ಶಿಲ್ಪ(ದ್ವಿ), ಪ್ರಬಂಧ ಸ್ಪರ್ಧೆಯ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಕೆ.ವಿ.ಐಶ್ವರ್ಯ(ಪ್ರ), ಅಂಜಲಿ ಮತ್ತು ರಕ್ಷಿತಾ(ದ್ವಿ), ರಸಪ್ರಶ್ನೆ ಸ್ಪರ್ಧೆಯಲ್ಲಿ ಗಿರಿಜಾ, ಹರ್ಷಿತಾ ಕೆ.ಪಿ, ವರ್ಷಿತಾ, ಬೇಬಿ, ಆರ್. ಹರ್ಷಿತಾ ತಂಡ(ಪ್ರ), ನೂರುನ್ನೀಸಾ, ಎಸ್. ಎಸ್.ಹರ್ಷಿತಾ, ಅನುಷಾ,ರಾಣಿ(ದ್ವಿ). ಸ್ಥಾನಗಿಟ್ಟಿಸಿದರು.


ಶಾರದಾ ವಿಲಾಸ ಕಾಲೇಜು
ಮೈಸೂರು
ರಾಷ್ಟ್ರೀಯ ಸೇವಾ ಯೋಜನೆ
SARADA VILAS EDUCATIONAL INSTITUTIONS (R)
SARADA VILAS COLLEGE
DEPT. OF COMMERCE AND
BUSINESS ADMINISTRATION
M.Com, B.Com, B.B.A.


ಜಿಲ್ಲಾಡಳಿತ,
ಜಿಲ್ಲಾ ಸ್ವೀಪ್ ಸಮಿತಿ ಹಾಗೂ
ಮೈಸೂರು ಮಹಾನಗರ ಪಾಲಿಕೆ
"ಮತದಾನಕ್ಕಿಂತ ಇನ್ನೊಂದಿಲ್ಲ
ನಾನು ಖಚಿತವಾಗಿ ಮತದಾನ ಮಾಡುವೆ"
ರಾಷ್ಟ್ರೀಯ
ಮತದಾರರ ದಿನ




Dated on: 25-01-2024 NSS UOM, Mysuru Organized 14th National Voting Day Programme at Kalamandira, Mysuru. NSS Volunteers Participated in the Proramme.

ತಮ್ಮ ನಂಬುಗೆಯ

ರಾ.ಸೇ.ಯೋ. ಕಾರ್ಯಕ್ರಮ ಸಂಯೋಜನಾಧಿಕಾರಿ

Programme Co-ordinator
National Service Scheme
NSS Bhavan
Sahukar Chennaiah Road
Opp. Saraswathipuram Police Station
Saraswathipuram, Mysuru-09